ಮುಖಾಂತರ ಕುಡಿಯುವ ನೀರು ಪೂರೈಕೆ ಮಾಡಲಾಗುತ್ತಿದೆ. ಇನ್ನುಳಿದ 6 ಗ್ರಾಮಗಳ ಜನರು ತೆರೆದ ಬಾವಿಯಿಂದ ಹಾಗೂ ಭೀಮಾ ನದಿಯಿಂದ ಕುಡಿಯುವ ನೀರನ್ನು ಉಪಯೋಗಿಸುತ್ತಿದ್ದಾರೆ,

3) ಬರಲಿರುವ ಬೇಸಿಗೆಯ ತಿಂಗಳುಗಳಲ್ಲಿ ಸಂಬಂಧಪಟ್ಟ ಹಳ್ಳಿಗಳಲ್ಲಿ ಕುಡಿಯುವ ನೀರಿನ ಅಭಾವ ಕಂಡುಬಂದಲ್ಲಿ ಅಂತಹ ಗ್ರಾಮಗಳಲ್ಲಿ ಅಭಾವ ಪರಿಹಾರ ಕಾರ್ಯಕ್ರಮದಲ್ಲಿ ಕೊಳವೆ ಬಾವಿಗಳನ್ನು ಒದಗಿಸುವ ಬಗ್ಗೆ ಪ್ರಸ್ತಾಪವು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಶ್ರೀ ಎನ್.ಆರ್. ಪಾಟೀಲ್.— ಕೊಳವೆ ಬಾವಿಗಳಲ್ಲಿ ನೀರೇ ಇಲ್ಲ. ಎಲ್ಲವೂ ಒಣಗಿ ಹೋಗಿವೆ. ಇದಕ್ಕೇನು ಮಾಡುತ್ತೀರಿ ? ಬೇಸಿಗೆ ಹತ್ತಿರ ಬಾತು; ಆದರೂ ಬಾವಿಗಳಲ್ಲಿ ನೀರು ಇಲ್ಲ. ಕೊಳವೆ ಬಾವಿಗಳು ವಿಫಲವಾಗಿವೆ. ಇದು ನಿಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಆಬ್ದುಲ್ ನಜೀರ್‌ಸಾಬ್.— ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಪರಿಹಾರ ಸಮಿತಿ ಇರುತ್ತದೆ. ಸಂಬಂಧಪಟ್ಟ ಶಾಸಕರೂ ಕೂಡ ಅದಕ್ಕೆ ಸದಸ್ಯರಾಗಿರುತ್ತಾರೆ. ಯಾವ್ಯಾವ ಗ್ರಾಮಗಳಿಗೆ ನೀರಿನ ಆಗತ್ಯತೆ ಇದೆಯೆಂದು ಜಿಲ್ಲಾ ಅಭಿವೃದ್ಧಿ ಮಂಡಳಿಗೆ ಬರೆದು ನಂತರ ಸರ್ಕಾರದ ಗಮನಕ್ಕೆ ಬಂದರೆ ಅಂತಹ ಗ್ರಾಮಗಳಿಗೆ ನೀರು ಒದಗಿಸಲು ಕ್ರಮ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಬಸವರಾಜ ಪಾಟೀಲ್.— ಮಾನ್ಯ ಅಧ್ಯಕ್ಷರೇ, ಕೊಳವೆ ಬಾವಿಗಳು ಹಾಕಿದ ತಕ್ಷಣ ಕೆಲವು ಕಡೆ ವಿಫಲವಾಗಿ ನೀರು ಸುರಿಯುವ ಸಂಭವ ಇರುವುದಿಲ್ಲ. ಕೊಳವೆ ಬಾವಿಗಳ ಜೊತೆಗೆ ಸೇದುವ ಬಾವಿಗಳನ್ನು ಕೂಡ ಇದರಲ್ಲಿ ತರತಕ್ಕಂಥ ವ್ಯವಸ್ಥೆಯನ್ನು ಆಳವಡಿಸುವುದಕ್ಕೆ ಸರ್ಕಾರ ಏನಾದರೂ ಕ್ರಮ ತೆಗೆದುಕೊಂಡಿದೆಯೆ ?

ಶ್ರೀ ಆಬ್ದುಲ್ ನಜೀರ್‌ಸಾಬ್.— ಎಲ್ಲಾ ಕೊಳವೆ ಬಾವಿಗಳು ಫೈಲ್ಯೂರ್ ಆಗುವುದಿಲ್ಲ. ಶೇಕಡಾ 13ರಷ್ಟು ವಿಫಲವಾಗಿವೆ. ಸೇದುವ ಬಾವಿಗಳನ್ನು ಕೂಡ ಮಾಡಬೇಕೆಂದು ಮಾನ್ಯ ಸದಸ್ಯರು ಏನು ಸಲಹೆ ಕೊಟ್ಟಿದ್ದಾರೆ. ಈಗಾಗಲೇ ಇದರ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆ. ಇದಕ್ಕೆ ಹಣವನ್ನೂ ಕೂಡ ಕೊಡಲಾಗಿದೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಜಿಲ್ಲಾ ಅಭಿವೃದ್ಧಿ ಮಂಡಲಿಗೆ ಅಧಿಕಾರ ಇದೆ.

ಅಧ್ಯಕ್ಷರು.— ಇಲ್ಲಿಗೆ ಪ್ರಶ್ನೋತ್ತರ ಮುಗಿಯಿತು.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮಂತ್ರಿಗಳು).—ಲಿಖಿತ ಮೂಲಕ ಉತ್ತರಿಸುವ ಹನ್ನೊಂದನೆಯ ಪಟ್ಟಿಯನ್ನು ನಾನು ಸಭೆಯ ಮುಂದಿಡುತ್ತೇನೆ.

ವಿಷಯ : ಹೂವಿನ ಹಿಪ್ಪರಗಿ ಗ್ರಾಮಕ್ಕೆ ಕುಡಿಯುವ ನೀರಿನ ಯೋಜನೆ.

ಪ್ರಶ್ನೆ : 108 (409) ಶ್ರೀ ಬಿ. ಎಸ್. ಪಾಟೀಲ್ (ಹೂವಿನ ಹಿಪ್ಪರಗಿ).— ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಬಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲ್ಲೂಕಿನ ಹೂವಿನ ಹಿಪ್ಪರಗಿ ಗ್ರಾಮದಲ್ಲಿ ಕುಡಿಯುವ ನೀರಿನ ಪರಿಸ್ಥಿತಿ ಅತ್ಯಂತ ಗಂಭೀರವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ;

ಆ) ಹಾಗಿದ್ದಲ್ಲಿ ಈ ಗ್ರಾಮಕ್ಕೆ ಪ್ರಾಶಸ್ತ್ಯದ ಮೇರೆಗೆ ಇದೇ ವರ್ಷ ನಳದ ಯೋಜನೆ ಮಂಜೂರು ಮಾಡಿ ಕಾರ್ಯ ಪ್ರಾರಂಭ ಮಾಡಲು ಸರ್ಕಾರದವರು ಉದ್ದೇಶಿಸಿದ್ದಾರೆಯೆ;

ಇ) ಜಿಲ್ಲಾ ಅಭಿವೃದ್ಧಿ ಮಂಡಳಿ ಸಭೆಯಲ್ಲಿ 1983-84ನೇ ಸಾಲಿಗಾಗಿ ನಳದ ಯೋಜನೆಯ ಮೇರೆಗೆ ತೆಗೆದುಕೊಳ್ಳಲಿಕ್ಕೆ ಶಿಫಾರಸು ಮಾಡಿದ ಒಂದು ಹಳ್ಳಿಗೆ ಕೇಂದ್ರದ ಹಾಗೂ ಒಂದು ರಾಜ್ಯದ (ಎನ್.ಆರ್.ಡಬ್ಲ್ಯೂ. ಆರ್. ಅಂಡ್ ಎ.ಆರ್.ಡಬ್ಲ್ಯೂ.ಎಸ್.) ಯೋಜನೆಯಲ್ಲಿ ಮಂಜೂರು ಮಾಡದೆ ಇರಲು ಕಾರಣವೇನು ?

ಉತ್ತರ : ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು).— ಅ) ಕುಡಿಯುವ ನೀರಿನ ಅಭಾವವು ಈ ಹಳ್ಳಿಯಲ್ಲಿ ಸಧ್ಯಕ್ಕೆ ಇರುವುದಿಲ್ಲ.

ಆ) ಪ್ರಸಕ್ತ ಸಾಲಿನಲ್ಲಿ ಹೊಸ ನಳದ ಯೋಜನೆಗಳನ್ನು ತೆಗೆದುಕೊಳ್ಳುವ ಬಗ್ಗೆ ಪ್ರಸ್ತಾಪವು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಇದಕ್ಕೆ ಉತ್ತರವನ್ನು ಪ್ರಶ್ನೆ "ಆ" ನಲ್ಲಿ ಕೊಡಲಾಗಿದೆ.

ವಿಷಯ : ಕಮತಗಿ ಗ್ರಾಮದಲ್ಲಿ ಇನ್ನೂ ಗ್ರಾಮೀಣ ಹಾಲು ಉತ್ಪಾದನ ಕೇಂದ್ರವನ್ನು ಬಾಗಲಕೋಟೆಗೆ ಎತ್ತಂಗಡಿ ಮಾಡಿದ್ದು ಕುರಿತು.

ಪ್ರಶ್ನೆ : 199 (44) ಶ್ರೀ ಮಲ್ಲಿಕಾರ್ಜುನ ವಿ ಬನ್ನಿ (ಗುಳೇದ ಗುಡ್ಡ).— ಮಾನ್ಯ ಪಶು ಸಂಗೋಪನಾ ಹಾಗೂ ಪಶುವೈದ್ಯ ಸೇವೆಗಳು ಹಾಗೂ ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಗುಳೇದಗುಡ್ಡದ ಕ್ಷೇತ್ರದ ಹುನಗುಂದ ತಾಲ್ಲೂಕಿನ ಕಮತಗಿ ಗ್ರಾಮದಲ್ಲಿದ್ದ ಗ್ರಾಮೀಣ

ಹಾಲು ಉತ್ಪಾದನಾ ಕೇಂದ್ರವನ್ನು ಬಾಗಲಕೋಟೆಗೆ ಸ್ಥಳಾಂತರಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಆದರ ವಿವರಗಳೇನು ಮತ್ತು ಗ್ರಾಮೀಣ ಯೋಜನೆಯನ್ನು ಪುನರುಜ್ಜೀವ ಗೊಳಿಸಲು ಸರ್ಕಾರದವರು ಕೈಗೊಂಡ ಕ್ರಮವೇನು ?

ಉತ್ತರ : ಶ್ರೀ **ವಿಶ್ವನಾಥರೆಡ್ಡಿ ಮುದ್ನಾಳ್** (ಪಶುಸಂಗೋಪನಾ ಪಶುವೈದ್ಯಕೀಯ ಹಾಗೂ ತೋಟಗಾರಿಕೆ ಮಂತ್ರಿಗಳು).— ಅ) ಇಲ್ಲ. ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ : ಶಿಕಾರಿಪುರ ಪ್ರಥಮ ದರ್ಜೆ ಕಾಲೇಜು.

ಪ್ರಶ್ನೆ : 171 (423) ಶ್ರೀ **ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).**— ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಹಿಂದಿನ ವರ್ಷದ ಆಯವ್ಯಯದಲ್ಲಿ ಶಿಕಾರಿಪುರ ಪ್ರಥಮ ದರ್ಜೆ ಕಾಲೇಜು ಕಟ್ಟಡವನ್ನು ನಿರ್ಮಿಸುವ ಬಗ್ಗೆ ಹಣ ಮಂಜೂರಾಗಿದ್ದು ಈ ವರ್ಷದ ಆಯವ್ಯಯದಲ್ಲಿ ಕೈಬಿಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಈ ವರ್ಷದ ಅನುಪೂರಕ ಆಯವ್ಯಯದಲ್ಲಿ ಈ ಕಟ್ಟಡದ ಕೆಲಸ ಮಂಜೂರು ಮಾಡಿಸಲು ಸೇರಿಸುವುದಾಗಿ ಮಾನ್ಯ ಮುಖ್ಯ ಮಂತ್ರಿಯವರು ಲಿಖಿತ ಮೂಲಕ ತಿಳಿಸಿರುವುದು ಕಾರ್ಯರೂಪಕ್ಕೆ ತರಲಾಗಿದೆಯೇ ?

ಉತ್ತರ : ಶ್ರೀ **ಬಿ. ರಾಚಯ್ಯ** (ಶಿಕ್ಷಣ ಮಂತ್ರಿಗಳು).— ಅ) ಬಂದಿದೆ.

ಆ) 1983-84ರಲ್ಲಿ ಪೂರಕ ಆಯವ್ಯಯದಲ್ಲಿ ಇದನ್ನು ಸೇರಿಸಲು ಆದೇಶ ನೀಡಲಾಗಿದೆ.

ವಿಷಯ : ಬಾಗೇಪಲ್ಲಿ ತಾಲ್ಲೂಕು ಜಲಪಿಗಾರಪಲ್ಲಿ ಗ್ರಾಮ ಪಂಚಾಯಿತಿಗೆ ಕಟ್ಟಡ ಮಂಜೂರು ಮಾಡುವುದು

ಪ್ರಶ್ನೆ : 102 (437) ಶ್ರೀ **ಚೌಡರೆಡ್ಡಿ (ಚಿಂತಾಮಣಿ)** .— ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಬಾಗೇಪಲ್ಲಿ ತಾಲ್ಲೂಕಿನ ಚೇಳೂರು ಹೋಬಳಿ ಜಲಪಿಗಾರಪಲ್ಲಿ ಗ್ರಾಮ ಪಂಚಾಯ್ತಿಗೆ ಪಂಚಾಯ್ತಿ ಕೇಂದ್ರ ಎಲ್ಲಿದೆ ;

ಆ) ಈ ಜಲಪಿಗಾರ ಪಂಚಾಯ್ತಿಗೆ ಪಂಚಾಯ್ತಿ ಕಟ್ಟಡ ಮಂಜೂರಾಗಿದೆಯೇ ; ಹಾಗಿದ್ದಲ್ಲಿ ಸದರೀ ಕಟ್ಟಡವನ್ನು ಎಲ್ಲಿ ನಿರ್ಮಿಸಲಾಗುತ್ತಿದೆ ?

ಉತ್ತರ : ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) .— ಅ) ಜಲಪಿಗಾರಪಲ್ಲಿ ಗ್ರಾಮವು ಹಾಲಿ ಪಂಚಾಯ್ತಿ ಕೇಂದ್ರವಾಗಿರುತ್ತೆ.

ಆ) ಮಂಜೂರಾಗಿದೆ. ಪಂಚಾಯ್ತಿ ಕಟ್ಟಡವು ಈ ಪಂಚಾಯ್ತಿ ವ್ಯಾಪ್ತಿಗೆ ಸೇರಿದ ಮುದ್ದಲಪಲ್ಲಿ ಗ್ರಾಮದಲ್ಲಿ ನಿರ್ಮಾಣವಾಗುತ್ತಿದೆ.

ವಿಷಯ : ಮುಂಡರಗಿ ತಾಲ್ಲೂಕಿನಲ್ಲಿ ಶೇಂಗಾ ಬೆಳೆಗೆ ರೋಗ ಹರಡಿರುವುದು.

ಪ್ರಶ್ನೆ : 115 (384) ಶ್ರೀ **ಕೆ. ಹೆಚ್. ಕುರಡಗಿ (ಮುಂಡರಗಿ)** .— ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಮುಂಡರಗಿ ತಾಲ್ಲೂಕಿನಲ್ಲಿ ಶೇಂಗಾ ಬೆಳೆಗೆ ಪೂಚಿರೋಗ ಬರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಹಾಗಿದಲ್ಲಿ ಆ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ ?

ಉತ್ತರ : ಶ್ರೀ ಬಿ. ಎಲ್ ಗೌಡ (ಕೃಷಿ ಸಚಿವರು) .— ಅ) ಬಂದಿದೆ.

ಆ) ಸುರುಳಿ ಪೂಚಿ ಕೀಟದ ನಿಯಂತ್ರಣಕ್ಕಾಗಿ ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ.

1) ಕೀಟನಾಶಕ ಔಷಧಿಗಳನ್ನು ಶೇ. 50ರ ರಿಯಾಯಿತಿದರದಲ್ಲಿ ಒದಗಿಸಲಾಗಿದೆ.

2) ಸುರಳಿ ಪೂಚಿ ಕೀಟವನ್ನು ಶೇಂಗಾಬೆಳೆಗೆ ಬರುವ ಎಂಡಮಿಕ್ (ಪ್ರತಿ ವರ್ಷವೂ ತಪ್ಪದೆ ಬರುವಕೀಟ) ಎಂದು ಧಾರವಾಡ, ಚಿತ್ರದುರ್ಗ, ಬಳ್ಳಾರಿ, ರಾಯಚೂರು, ಗುಲ್ಬರ್ಗಾ, ತುಮಕೂರು, ಕೋಲಾರ ಮತ್ತು ಇತರೆ ಪ್ರದೇಶಗಳಲ್ಲಿ ಘೋಷಿಸಲಾಗಿದೆ.

3) ಕೃಷಿ ಇಲಾಖೆಯ ವಿಸ್ತರಣಾ ಸಿಬ್ಬಂದಿಯವರು ತಮ್ಮ ಭೇಟಿಯ ಸಮಯದಲ್ಲಿ ಈ ಕೀಟದ ಹತೋಟಿ ಕ್ರಮಕ್ಕಾಗಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ತಿಳುವಳಿಕೆ ಕೊಟ್ಟಿದ್ದಾರೆ.

4) ಪತ್ರಿಕೆ ಹಾಗೂ ಆಕಾಶವಾಣಿಯ ಮೂಲಕ ರೈತರು ತೆಗೆದುಕೊಳ್ಳಬೇಕಾಗಿರುವ ಹತೋಟಿ ಕ್ರಮಗಳ ಬಗ್ಗೆ ತಿಳುವಳಿಕೆ ಕೊಡಲಾಗಿದೆ.

5) ಪ್ಯಾಕೆಗೆಗಳನ್ನು ಕೂಡ ವ್ಯವಸ್ಥೆ ಮಾಡಲಾಗಿದೆ.